ಬೇಡ. ಇದೇನು ಧಾರಾವಾಹಿ ಕತೆ ಅಲ್ಲ ಎಳೆದೆಳೆದು ಹೇಳೋಕೆ. ನೇರವಾಗಿ ವಿಷಯಕ್ಕೆ ಬನ್ನಿ" ಎಂದರು. "ನಿನ್ನೆ ಸಂಜೆ ಮೆಜೆಸ್ಟಿಕ್ ಬಳಿ ಇರೋ ಸುಂದರಿ ಲಾಡ್ಜ್‌ನಲ್ಲಿ ಒಬ್ಬ ಯುವತಿಯ ಕೊಲೆ ಯತ್ನ ಆಗಿದೆ ಅಂತೆ. ಆ ಯುವತಿ ಇದ್ದ ರೂಮು ನನ್ನ ತಮ್ಮನ ಹೆಸರಿನಲ್ಲಿತ್ತಂತೆ. ಆ ರೂಮಿನಲ್ಲಿದ್ದ ಚಾಕು, ಫೋರ್ಕು, ಗಾಜಿನ ಲೋಟಗಳ ಮೇಲೆ ನನ್ನ ತಮ್ಮನ ಬೆರಳ ಗುರುತುಗಳಿವೆಯಂತೆ. ಅದಕ್ಕೆ ನನ್ನ ತಮ್ಮನನ್ನ ಪೊಲೀಸ್ನೋರು ಕೊಲೆ ಪ್ರಯತ್ನದ ಆಪಾದನೆ ಮೇಲೆ ಅರೆಸ್ಟ್ ಮಾಡಿದಾರೆ. ನೀವೇ ಬಿಡುಸ್ಬೇಕು ಅವನನ್ನ. ಅವನು ಅಂಥ ಕೆಲಸ ಮಾಡೋನಲ್ಲ. ತುಂಬಾ ಒಳ್ಳೆ ಹುಡುಗ" ಎಂದು ಮತ್ತೆ ಕಣ್ಣೀರ ಧಾರೆ ಹರಿಸತೊಡಗಿದಳು.

"ಅಲ್ಲರೀ... ಮದ್ವೆ ಆಗಿದ್ಯೇನ್ರೀ ನಿಮ್ಮ ತಮ್ಮನಿಗೆ?'' ಎಂದು ಕೇಳಿದರು ಸಿ.ಎಸ್.ಪಿ. ಲಾಯರು. ಕೂಡಲೇ ಕಣ್ಣೀರು ಒರೆಸಿಕೊಂಡ ಆಕೆ ಉತ್ಸಾಹದಿಂದ. "ಇಲ್ಲ ಸಾರ್... ಇನ್ನೂ ಮದ್ವೆ ಆಗಿಲ್ಲ. ನನಗೂ ಅದೇ ಕೊರಗು ಆಗಿಬಿಟ್ಟಿದೆ. 31 ವರ್ಷ ಆಯ್ತು ಅವನಿಗೆ. ನಮ್ಮ ತಂದೆ ತಾಯಿ ತೀರಿಕೊಂಡು ಆರು ವರ್ಷ ಆಯಿತು. ಈಗ ಐದು ವರ್ಷದಿಂದ ಅವನಿಗೆ ನಾನೇ ಹೆಣ್ಣು ಹುಡುಕ್ತಿದೀನಿ. ಯಾವ್ದು ಸಿಕ್ತಿಲ್ಲ. ನಮ್ಮ ಜನದಲ್ಲಿ ಹೆಣ್ಣುಗಳೇ ಕಡಿಮೆ ಆಗ್ಬಿಟಿವೆ ಸಾರ್... ನಿಮ್ಕಡೆ ಯಾವ್ದಾದ್ರೂ ಒಳ್ಳೆ ಹುಡುಗಿ ಇದ್ರೆ ಹೇಳಿ ಸಾರ್..." ಎಂದು ಹೇಳುತ್ತಲೇ ಹೋದಳು ಹೇಮಾಮಾಲಿನಿ.

"ಥತ್ ತೆರಿಕೆ. ರ್ರೀ, ನಿಮ್ಮ ತಮ್ಮ ಯಾವ್ದೋ ಹುಡುಗಿಯ ಕೊಲೆ ಕೇಸಲ್ಲಿ ಸಿಗಾಕ್ಕೊಂಡಿದಾನೆ... ಅಷ್ಟಿಗೆ ನಾನು ಹೆಣ್ಣು ಹುಡುಕಬೇಕಾ? ಏನ್ ಕರ್ಮನಪ್ಪ... ನನ್ನ ಧಾರಾವಾಹಿಯಲ್ಲಿ ಇದಕ್ಕಿಂತ ಡೀಸೆಂಟಾಗಿರೂ ದಡ್ಡ ಪಾತ್ರಗಳನ್ನು ನೋಡಿಯೇ ಜನ ನನಗೆ 'ಏನ್ಸಾರ್, ತೀರಾ ಅಷ್ಟು ಮೂರ್ಖರು ಇರ್ತಾರ ಪ್ರಪಂಚದಲ್ಲಿ' ಅಂತ ಕೇಳ್ತಾರೆ. ನನ್ನ ಧಾರಾವಾಹಿ ಪಾತ್ರಗಳೇ ವಾಸಿ ಕಣ್ರೀ... ನಿಮ್ಮಂತೋರು ಇರ್ತಾರೆ ಅಂದ್ರೆ ನಂಬಕ್ಕೇ ಆಗಲ್ಲ. ಈಗೇನು ನಾನು ನಿಮ್ಮ ತಮ್ಮನನ್ನ ಪೊಲೀಸಿನೋರಿಂದ ಬಿಡಿಸಬೇಕೋ ಅಥವಾ ಮದುವೆ ಬ್ರೋಕರ್ ಆಗಿ ಅವನಿಗೆ ಹೆಣ್ಣು ಹುಡುಕಬೇಕೋ?" ಎಂದು ರೇಗಿದರು ಸಿ.ಎಸ್.ಪಿ. ಲಾಯರು.

"ಇಲ್ಲ ಸಾರ್. ಸಾರಿ ಸಾರ್... ನೀವು ಪೊಲೀಸಿನವರಿಂದ ಅವನನ್ನು ಬಿಡ್ಸಿ ಸಾಕು. ಅಷ್ಟಿಗೆ ಯಾವಳ್ನಾದ್ರೂ ನೋಡಿ ನಾನೇ ಗಂಟು ಹಾಕ್ತೀನಿ. ಈ ವರ್ಷ ನನ್ನ ತಮ್ಮನ ಮದುವೆ ಆದ್ರೆ ನಮ್ಮೆಜಮಾನ್ರು ಮುಡಿಕೊಟ್ಟು, ಕಲ್ಯಾಣೋತ್ಸವ ಮಾಡುಸ್ತೀನಿ ಅಂತ ತಿರುಪತಿ ತಿಮ್ಮಪ್ಪನಿಗೆ ಹರಕೆ ಹೊತ್ತಿದೀನಿ ಸಾರ್. ಅಷ್ಟರಲ್ಲಿ ಇವನು ಇಂಥ ಕೆಲ್ಸ ಮಾಡ್ಕೊಂಡಿದಾನೆ" ಎಂದಳು.

"ನೋಡ್ರೀ ಹೇಮಾಮಾಲಿನಿ ಅವ್ರೇ, ಹೋಟೆಲ್ ರೂಮು ನಿಮ್ಮ ತಮ್ಮನ ಹೆಸರಲ್ಲಿದೆ. ಅಲ್ಲಿ ನಿಮ್ಮ ತಮ್ಮನ ಬೆರಳ ಗುರುತುಗಳೂ ಸಿಕ್ಕಿವೆ ಅಂತ ಹೇಳ್ತೀರ. ಅಂಥದ್ರಲ್ಲಿ ಆ ಯುವತಿಯ ಕೊಲೆ ಪ್ರಯತ್ನದ ಕೇಸಿಂದ ನಿಮ್ಮ ತಮ್ಮನನ್ನ ಯಾರೂ ಬಿಡ್ಸಕ್ಕೆ ಆಗಲ್ಲ. ಅಲ್ರೀ ನಿಮ್ಮ ತಮ್ಮನಿಗೂ ಆ ಯುವತಿಗೂ ಏನ್ರೀ ಸಂಬಂಧ? ಅವಳ್ಯಾಕ್ರೀ ಇವನ ಹೋಟೆಲ್ ರೂಮಿಗೆ ಬಂದಳು? ಇಂಥ ಕೆಟ್ಟ ಹುಡುಗರನ್ನ ನಮ್ಮ ಧಾರಾವಾಹಿಯಲ್ಲೂ ನಾನು ಸಪೋರ್ಟ್ ಮಾಡಲ್ಲ. ಇನ್ನು ನಿಜ ಜೀವನದಲ್ಲಿ ಬಿಡ್ತೀನಾ? ಛೇ... ಛೇ... ಛೇ... ನಡೀರಿ ಸುಮ್ನೆ ನನ್ನ ಟೈಂ ವೇಸ್ಟ್ ಮಾಡ್ಬೇಡಿ...'' ಎಂದರು ಸಿ.ಎಸ್.ಪಿ.

"ಅಯ್ಯೋ... ಹಂಗೇಳ್ಬೇಡಿ ಸಾರ್ ನಂಗೆ ಇರೋನೊಬ್ಬನೇ ತಮ್ಮ. ಅವನಿಗೂ ಇನ್ಯಾರಿಲ್ಲ. ಅವ್ನು ಅಂಥೋನಲ್ಲ. ನಿಮ್ ಥರನೇ ಸಾರ್ ಅವ್ನು. ತುಂಬಾ ಪ್ರಾಮಾಣಿಕ. ಬಡವ್ರು ಬಗ್ಗರು ಅಂದ್ರೆ ತುಂಬ ಕರುಣೆ. ಒಂದು ಸೊಳ್ಳೇನೂ ಸಾಯ್ಸೋನಲ್ಲ ಅವನು. ಅವನು ಹೋಟೆಲ್ ರೂಮಿನಲ್ಲಿ